# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಪ್ರಾಸಾ-13 ಚಾಸಾ-49)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 14.07.2022

| | | |
|---|---|---|
| ಸಾಕ್ಷಿದಾರರ ಹೆಸರು | - | ರಂಗಪ್ಪ, |
| ತಂದೆಯ ಹೆಸರು | - | ತಿಪ್ಪಯ್ಯ, |
| ವಯಸ್ಸು | - | 65 ವರ್ಷ, |
| ಉದ್ಯೋಗ | - | ವ್ಯಾಪಾರ, |
| ವಾಸ | - | ವಿಶ್ವನಾಥಪುರ. |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

1. ಈಗ ಸುಮಾರು ಹತ್ತು ವರ್ಷಗಳ ಹಿಂದೆ ವಿಶ್ವನಾಥಪುರ ಪೋಲಿಸ್ ಠಾಣೆಯ ಸಿಬ್ಬಂದಿ ನನ್ನನ್ನು ಠಾಣೆಯ ಹತ್ತಿರ ಕರೆದು ಈಗ ತೋರಿಸಲಾದ ದಾಖಲೆಗೆ ನನ್ನ ಸಹಿ ಪಡೆದಿದ್ದಾರೆ. ಸಾಕ್ಷಿಗೆ ತೋರಿಸಿದ ದಾಖಲೆ ನಿಪಿ-16 ಮಹಜರ್ ಇದ್ದು ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-16(ಬಿ) ಎಂದು ಗುರ್ತಿಸಲಾಯಿತು. ನ್ಯಾಯಾಲಯದ ಮುಂದಿರುವ ಈಗ ತೋರಿಸಿದ 6 ನೇ ಆರೋಪಿ ಶಾಂತಕುಮಾರ ಇವರನ್ನು ನಾನು ನೋಡಿಲ್ಲ. ಈಗ ತೋರಿಸಿದ ಮು.ಮಾ-24 ರಿಂದ 26 ಮೂರು ಮೊಬೈಲ್ ಫೋನ್ ಗಳನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಎಸ್ ಪಿ ಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದರಿಂದ ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಕರವರಿಂದಃ**

2. ದಿಃ21.02.2010 ರಂದು ಬೆಳಗ್ಗೆ ಸುಮಾರು 09.00 ಕ್ಕೆ ಪೋಲಿಸರು ನನ್ನನ್ನು ಮತ್ತು ಚಾಸಾ-48 ಹಾಗೂ 50 ಇವರನ್ನು ವಿಶ್ವನಾಥಪುರ ಪೋಲಿಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿಯಲ್ಲ. ಠಾಣೆಯಲ್ಲಿ 6 ನೇ ಆರೋಪಿ ಇವರು ಇದ್ದರು ಎಂದರೆ ಸರಿಯಲ್ಲ. ಅವರು ಕೃತ್ಯಕ್ಕೆ ಸಂಬಂಧಿಸಿದ ಮೂರು ಮೊಬೈಲ್ ಫೋನ್ ಗಳನ್ನು ಹಾಜರುಪಡಿಸುವುದಾಗಿ ಹೇಳಿದ್ದರಿಂದ ಡಿವೈಎಸ್ಪಿರವರು ನಮ್ಮನ್ನು

ಪಂಚಸಾಕ್ಷಿದಾರರಾಗಿ ಕರೆಸಿದ್ದರು ಎಂದರೆ ಸರಿಯಲ್ಲ. ನಂತರ ಸದರಿ ಆರೋಪಿ ನಮ್ಮನ್ನು ದ್ಯಾವರಹಳ್ಳಿಯ ತನ್ನ ಮನೆಗೆ ಕರೆದುಕೊಂಡು ಹೋಗಿ ಮನೆಯ ಒಳಗಿನಿಂದ ನನಗೆ ತೋರಿಸಿದ ಮು.ಮಾ-24 ರಿಂದ 26 ಮೊಬೈಲ್ ಫೋನ್ ಗಳನ್ನು ಹಾಜರುಪಡಿಸಿದ ಎಂದರೆ ಸರಿಯಲ್ಲ. ಪೋಲಿಸರು ಅವುಗಳನ್ನು ನಮ್ಮ ಸಮಕ್ಷಮ ನಿಪಿ-16 ರಂತೆ ಮಹಜರ್ ಮಾಡಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆಗ ಸಮಯ ಬೆಳಗ್ಗೆ 10.00 ರಿಂದ 10.45 ಘಂಟೆ ಆಗಿತ್ತು ಎಂದರೆ ಸರಿಯಲ್ಲ. ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಎಲ್ಲಾ ಆರೋಪಿತರ ಪರ ವಕೀಲರು ತಮ್ಮ ಪರವಾಗಿ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಢೀಕರಿಸಿದ್ದೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ವಿ. ಎಂ. ಆನಂದಶೆಟ್ಟಿ)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು